# ‘ಲಕ್ಕಿ’ ಎಂಬ ಅದೃಷ್ಟವನ್ನು ಅರಸುತ್ತಾ

**ಶಾಲೆಯಲ್ಲಿ ಮೇಷ್ಟರು ಕೊಟ್ಟ ಚಡಿ ಏಟು ಮರೆಯಲು ಸಾಧ್ಯವೇ? ಹಾಗೇ ಚುರುಕು ಮುಟ್ಟಿಸುತ್ತಿದ್ದ ಆ ಏಟಿನ ಹಿಂದಿನ ಈ ‘ಲಕ್ಕಿ’ ಗಿಡವನ್ನೂ ಮರೆಯುವಂತಿಲ್ಲ.**

■ ವಿನು ಗಂಗೆ



ಗ್ರೀಸ್‌ನ ಪ್ರಖ್ಯಾತ ವಿಜ್ಞಾನಿ ಆರ್ಕಿಮಿಡಿಸ್‌ಗೆ ಸನ್ನೆಯ (Lever) ಮಹಾನ್ ಶಕ್ತಿ ಅರಿವಾದಾಗ, ‘ನನಗೆ ಒಂದು ಉದ್ದನೆಯ ಸನ್ನೆ ಕೋಲು, ಆಧಾರ (Fulcrum), ನಿಲ್ಲಲು ಸ್ಥಳ ಕೊಡಿ, ನಾನು ಈ ಭೂಮಿಯನ್ನು ಚಲಿಸುತ್ತೇನೆ’ ಎಂದು ಉದ್ಗರಿಸಿದನಂತೆ. ಆರ್ಕಿಮಿಡಿಸ್‌ನ ಈ ಮಾತುಗಳು ಮೇಲ್ನೋಟಕ್ಕೆ ಧಾರ್ಷ್ಟ್ಯದ ಪರಮಾವಧಿಯಂತೆ ಕಂಡರೂ ಅವನಿಗೆ ಸಾಕ್ಷಾತ್ಕಾರವಾದ ಸಿದ್ಧಾಂತದ ಮೇಲಿನ ಅಪರಿಮಿತ ಆತ್ಮವಿಶ್ವಾಸದ ನುಡಿಗಳೇ ಆಗಿವೆ.

ಬೆಂಗಳೂರಿನ ಹವಾಗುಣ, ಪಶ್ಚಿಮಘಟ್ಟಗಳ ಅಪರೂಪದ ಮರಗಳ ಬೆಳವಣಿಗೆಗೆ ಎಂತಹ ಪೋಷಕ ನೆಲೆ ಒದಗಿಸುತ್ತದೆಂದರೆ, ನಮ್ಮ ತೋಟದಲ್ಲಿ ಆಳೆತ್ತರ ಬೆಳೆಸಲು ಹರಸಾಹಸಪಡಬೇಕಾದ ಸುರಗಿ, ತಾರೆ, ದೇವದಾರು, ಬಳಿಂಜಿ ಇತ್ಯಾದಿ ಮರಗಳು ಬೆಂಗಳೂರಿನಲ್ಲಿ ಹಚ್ಚಿದ ಕೆಲವೇ ವರ್ಷಗಳಲ್ಲಿ ಸುಖವಾಗಿ ಬೆಳೆಯುತ್ತವೆ. ಇದನ್ನು ಕಂಡ ನನಗೆ ಆಗಾಗ್ಗೆ, ‘ಬೆಂಗಳೂರಿನಲ್ಲಿ ಅರ್ಧ ಎಕರೆ; ಬೇಡ, ಮನೆ ಎದುರಿನ ಕೆರೆ ಏರಿಯ ಸುಪರ್ದಿ, ನೀರುಣಿಸುವ ಅನುಕೂಲ ಸಿಕ್ಕರೆ ಸಾಕು, ಅಳಿವಿನಂಚಿನಲ್ಲಿರುವ ಮರಗಳ ಸುಂದರ ಕಾಡು ಸೃಷ್ಟಿಸಬಹುದು’ ಎಂದು ಆರ್ಕಿಮಿಡಿಸ್‌ನಂತೆ ಅತಿರೇಕದ ಆತ್ಮವಿಶ್ವಾಸ ಮೂಡುತ್ತದೆ. ಇಂತಹ ಹಗಲುಗನಸುಗಳಿಗೆ ಪುಷ್ಟಿ ಕೊಡುವಂತೆ ಇಲ್ಲಿನ ವಾತಾವರಣದಲ್ಲಿ ಅಸಾಧಾರಣವಾಗಿ ರೂಪುಗೊಂಡ ಮತ್ತೊಂದು ಮರವೇ ಲಕ್ಕಿ.

ಚೆನ್ನಾಗಿ ಬಳುಕುವ ಗುಣದಿಂದ ಮುರಿದು ಹೋಗದೇ, ಅಷ್ಟೇ ಚೆನ್ನಾಗಿ ಚುರುಕು ಮುಟ್ಟುವಂತೆ ತುಂಟ ಹುಡುಗರನ್ನೂ, ಪುಂಡು ದನಗಳನ್ನೂ ಅಂಕೆಯಲ್ಲಿಡಲು ಬಳಕೆಯಾಗುತ್ತಿದ್ದ ಲಕ್ಕಿ ಕಡ್ಡಿ ಯಾರಿಗೆ ಗೊತ್ತಿಲ್ಲ? ಲಕ್ಕಿ ಗೊತ್ತಿರುವುದಷ್ಟೇ ಅಲ್ಲ ನಮ್ಮಲ್ಲಿ ಅನೇಕರಿಗೆ ಆ ಕಡ್ಡಿಯ ಏಟಿನ ರುಚಿಯೂ ನೆನಪಿರಬಹುದು. ಕಳೆದ ಶತಮಾನದ ಮೇಷ್ಟರುಗಳ ಮೆಚ್ಚಿನ ಲಕ್ಕಿಯ ವೈಜ್ಞಾನಿಕ ಹೆಸರು **Vitex Negundo.**

ಹಿಂದೆ ಮನೆಗಳಿಗೆ, ಹೊಲಗಳಿಗೆ ಬೇಲಿಯಾಗಿ ಇದನ್ನು ಹಚ್ಚುತ್ತಿದ್ದರು. ಕೆರೆಯ ಏರಿ ಬದಿಗೆ ಬೇಕಾದಷ್ಟು ಬೆಳೆದು ಕೆರೆಯ ಒಡ್ಡು ಒಡೆಯದಂತೆ ಕಾಪಾಡುವುದು ಕೂಡ ಲಕ್ಕಿಯೇ ಆಗಿತ್ತು. ಕೀಲುನೋವಿಗೆ ಹಾಗೂ ಕಫ ನಿವಾರಕವಾಗಿ ಲಕ್ಕಿ ಸೊಪ್ಪು ಬಳಕೆಯಲ್ಲಿತ್ತು. ಆದರೆ, ಸಾಮಾನ್ಯವಾಗಿ ನಾವೆಲ್ಲರೂ ಕಂಡ ಲಕ್ಕಿ, ಗಿಡವೇ ಹೊರತು ಮರವಲ್ಲ. ಬೆಂಗಳೂರಿನ ವಾತಾವರಣದಲ್ಲಿ ಲಕ್ಕಿ ಕೇವಲ ಗಿಡವಾಗುಳಿವ ಮಿತಿಗೊಳಪಡದೇ ಮರವಾಗಿ ಬೆಳೆಯುತ್ತದೆ. ಸುಂದರ ಪೊದೆಯಂತಹ ಸಾಧಾರಣ ಗಾತ್ರದ ಮರವಾಗಿ ಅಲ್ಲೊಂದು ಇಲ್ಲೊಂದು ಲಕ್ಕಿಯ ಮರಗಳು ಕಾಣುತ್ತವೆ. ಈಗ ಜೈವಿಕ ಕೆರೆ ಏರಿಯಾಗಲೀ, ಬೇಲಿಯಾಗಲೀ ಇಲ್ಲವಾಗಿ ಲಕ್ಕಿ ಅಪರೂಪವಾಗುತ್ತಿದೆ.

ಲಕ್ಕಿ ಹಿಂದೆ ಹೇಳಿದ ಹೊಳೆ ಲಕ್ಕಿ ಮರದ ಸಂಬಂಧಿ. ಮೂರು ಅಥವಾ ಐದು ಎಲೆಗಳು ಕೂಡಿದಂತೆ ಇರುತ್ತದೆ. ಚಿಕ್ಕದಾಗಿದ್ದಾಗ ಗುಲಾಬಿ ಎಲೆಗಳಂತೆ ಹೊರ ಅಂಚಿದ್ದು, ದೊಡ್ಡದಾಗಿ ಬೆಳೆದಂತೆ ಸಪಾಟಾಗಿರುತ್ತದೆ. ನೇರಳೆ ಬಣ್ಣದ ಸಣ್ಣ ಹೂ ಬಿಡುತ್ತದೆ. ಲಕ್ಕಿಯ ಎಲೆಗಳ ತಳ ಭಾಗದಲ್ಲಿರುವ ಬಣ್ಣದಿಂದ ಎರಡು ವಿಧಗಳಾಗಿ ಗುರುತಿಸುತ್ತಾರೆ. ಒಂದು ಬಿಳಿ, ಇನ್ನೊಂದು ಕೆಂಪು. ಬಿಳಿ ಲಕ್ಕಿ ಸಾಧಾರಣವಾಗಿ ಕಾಣಬಹುದು. ಆದರೆ, ಕೆಂಪು ಲಕ್ಕಿ ಅತ್ಯಂತ ಅಪರೂಪದ್ದೆನಿಸಿದೆ. ಕೆಂಪು ಅಥವಾ ಕಪ್ಪು ಲಕ್ಕಿ ಎಂಬ ಹೆಸರಿನಿಂದ ಗುರುತಿಸಿದರೂ ಅದರ ಎಲೆ ಕೆಳ ಭಾಗದಲ್ಲಿ ಕಾಣುವುದು ಕೆಂಪು

